3) ಗ್ರೂಪ್-3 ಮತ್ತು ಟ್ರೇಸರ್ ಹುದ್ದೆಗಳನ್ನು ಶೇ.5ರಷ್ಟು ಹುದ್ದೆಗಳನ್ನು ಕಡಿತಗೊಳಿಸುವ ಕುರಿತು ಸರ್ಕಾರಕ್ಕೆ ಸಲ್ಲಿಸಲಾಗಿರುವ ಪ್ರಸ್ತಾವನೆಯಲ್ಲಿ ಸೇರ್ಪಡೆ ಮಾಡಲಾಗಿರುತ್ತದೆ. ಸರ್ಕಾರದಿಂದ ಅಂತಿಮ ಆದೇಶ ಹೊರಡಿಸಿದ ನಂತರ ಅವಶ್ಯಕತೆ ಇದ್ದಲ್ಲಿ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ : ಎಫ್‌ಡಿ : 01 : ಬಿಇಎಂ :98 ದಿನಾಂಕ : 23-10-98ರ ಅನುಸಾರ ಆರ್ಥಿಕ ಇಲಾಖೆಯಿಂದ ಅನುಮೋದನೆ ಪಡೆದುಕೊಂಡು ನಂತರ ಕೃಷಿ ಇಲಾಖೆಯಲ್ಲಿ ತೆರವಿರುವ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಕ್ರಮ ಜರುಗಿಸಲಾಗುವುದು.

ಧಾರ್ಮಿಕ ದತ್ತಿ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳು.

913(1458) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಧಾರ್ಮಿಕ ದತ್ತಿ ಇಲಾಖೆಯಲ್ಲಿ ಖಾಲಿ ಇರುವ 'ಎ' ಶ್ರೇಣಿಯ ಹುದ್ದೆಗಳ ಸಂಖ್ಯೆ ಎಷ್ಟು; (ವಿವರ ನೀಡುವುದು).

2) ಇಷ್ಟು ದೊಡ್ಡ ಖಾಲಿ ಹುದ್ದೆಗಳಿಗೆ ಪ್ರಭಾರ ಅಧಿಕಾರಿ ಕೊಡಲು ಕಾರಣಗಳೇನು; ಇಲಾಖೆಯಲ್ಲಿ ಈ ಹುದ್ದೆಗಳಿಗೆ ಅರ್ಹರಾದ ಅಧಿಕಾರಿಗಳು ಇಲ್ಲವೇ; (ವಿವರ ನೀಡುವುದು).

3) ಇಲ್ಲಿಯವರೆಗೆ ಸರ್ಕಾರ ಪೂರ್ಣಾವಧಿ ನೇಮಕ ಮಾಡದಿರುವುದಕ್ಕೆ ಕಾರಣಗಳೇನು? (ವಿವರ ನೀಡುವುದು).

ಶ್ರೀ ಬಿ. ಮುನಿಯಪ್ಪ ಮುದ್ದಪ್ಪ (ಮುಜರಾಯಿ ಸಚಿವರು) :—

1) ಧಾರ್ಮಿಕ ದತ್ತಿ ಇಲಾಖೆಯಲ್ಲಿ 'ಎ' ಶ್ರೇಣಿಯ ಒಟ್ಟು 7 (ಏಳು) ಹುದ್ದೆಗಳು ಖಾಲಿ ಇರುತ್ತದೆ. ಪಟ್ಟಿ ಲಗತ್ತಿಸಿದೆ. 1 ಹುದ್ದೆ ಸೀನಿಯರ್ ಸ್ಕೇಲ್ ಉಳಿದ 6 ಹುದ್ದೆ ಗ್ರೂಪ್ 'ಎ' ಹುದ್ದೆಗಳು

2) ಇಲಾಖೆಯಲ್ಲಿ ಜೇಷ್ಠತಾಪಟ್ಟಿಯ ಬಗ್ಗೆ ವಿವಾದವಿದ್ದು ವ್ಯಂದ ಮತ್ತು ನೇಮಕಾತಿ ನಿಯಮಗಳು ಜಾರಿಗೆ ಬಂದ ದಿನದಿಂದ ನೇರ ನೇಮಕಾತಿ ಹಾಗೂ ಬಡ್ತಿ ಹುದ್ದೆಗಳನ್ನು ವರ್ಗೀಕರಿಸಿ ಪ್ರಕಟಿಸುವ ಬಗ್ಗೆ ಪರಿಶೀಲನೆಯಲ್ಲಿದೆ. ಜೇಷ್ಠತಾ ಪಟ್ಟಿಯನ್ನು ಶೀಘ್ರವಾಗಿ ಪ್ರಕಟಿಸಿ ಬಡ್ತಿಯ ಮೂಲಕ ತೆರವಾಗಿರುವ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

3) ಮೇಲಿನಂತೆಯೇ.

ಧಾರ್ಮಿಕ ದತ್ತಿ ಇಲಾಖೆಯಲ್ಲಿ ಖಾಲಿ ಇರುವ ಸಮೂಹ 'ಎ' ಹುದ್ದೆಗಳ ವಿವರ

ಹುದ್ದೆಯ ವಿವರ

1) ಕಾರ್ಯನಿರ್ವಾಹಕ ಅಧಿಕಾರಿಗಳು (ಸೀನಿಯರ್ ಸ್ಕೇಲ್ ಹುದ್ದೆ)
ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಾಲಯ,
ಮಹದೇಶ್ವರ ಬೆಟ್ಟ ಕೊಳ್ಳೇಗಾಲ ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

2) ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ರೇಣುಕಾಯಲ್ಲಮ್ಮ ದೇವಸ್ಥಾನ,
ಸವದತ್ತಿ, ಬೆಳಗಾಂ.

3) ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ಸುಬ್ರಮಣ್ಯ ದೇವಸ್ಥಾನ.

4) ಕಾರ್ಯನಿರ್ವಾಹಕ ಅಧಿಕಾರಿಗಳು,
ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ದೇವಾಲಯ,
ಯಡಿಯೂರು.

5) ಸಹಾಯಕ ಆಯುಕ್ತರು (ಮುಜರಾಯಿ),
ನಗರಸಭಾ ವಲಯ,
ಬೆಂಗಳೂರು.

6) ಕೇಂದ್ರ ಸ್ಥಾನೀಕ ಸಹಾಯಕರು,
ಆಯುಕ್ತರ ಕಛೇರಿ,
ಬೆಂಗಳೂರು.

7) ವಿಶೇಷಾಧಿಕಾರಿಗಳು,
ಕರ್ನಾಟಕ ರಾಜ್ಯ ಛತ್ರ
ತಿರುಮಲ.

ತಿರುಮಲೈ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ಛತ್ರದಲ್ಲಿನ ಅವ್ಯವಹಾರ.

914(1459) ಶ್ರೀ ಯು.ಆರ್. ಸಭಾಪತಿ (ಉಡುಪಿ) :— ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.